ವಾಸ್ತವಾಂಶ ಏನು ಇದೆ ಅದನ್ನು ಬರೆದು ಪ್ರಕಟಣೆ ಮಾಡಿ ಎಂದು ಅವರಿಗೆ ಹೇಳುತ್ತೇವೆ. ಅವರು ಪ್ರಕಟಣೆ ಮಾಡದೇ ಹೋದರೆ ಏನು ಮಾಡಬೇಕೆಂದು ನಂತರ ನಿರ್ಧರಿಸಬಹುದು.

(ಗ) ಕೇಂದ್ರ ಸರ್ಕಾರ ರೇಷ್ಮೆ ಆಮದು ನೀತಿಯಿಂದ ರಾಜ್ಯದ ಕೃಷಿಯ ಮೇಲೆ ಬೀರಿರುವ ಪರಿಣಾಮ.

+ ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) :— ಮಾನ್ಯ ಅಧ್ಯಕ್ಷರೆ, ಇತ್ತೀಚಿನ ಕೇಂದ್ರ ಸರ್ಕಾರದ ರೇಷ್ಮೆ ಆಮದು ನೀತಿಯಿಂದ ಈಗಾಗಲೇ ನಮ್ಮ ರಾಜ್ಯದ ಕೃಷಿಯ ಮೇಲೆ ಸಾಕಷ್ಟು ಪರಿಣಾಮವನ್ನು ಬೀರಿದೆ ಎನ್ನುವುದು ನಿರ್ವಿವಾದ ಸಂಗತಿ. ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಒಂದು ಮಾತನ್ನು ಹೇಳಿದ್ದಾರೆ. 'The recent development of entry of international silk into Indian market has posed a serious challenge to the sericulture industry as never before. Indeed it poses a threat to the survival of sericulture. My Government, therefore, urges the Government of India to consider withdrawal of the notification permitting import of silk '. ಈಗ ಕೇಂದ್ರ ಸರ್ಕಾರದ ರೇಷ್ಮೆ ಆಮದು ನೀತಿ ಏನು ಬಂದಿದೆ, ಅದು ಬಂದಾದ ನಂತರದ ಪರಿಸ್ಥಿತಿಯನ್ನು ಗಮನಿಸಿದಾಗ ಇಲ್ಲಿಯ ರೇಷ್ಮೆ ಕೃಷಿಯ ಮೇಲೆ ತೀವ್ರತರವಾದಂಥ ಪರಿಣಾಮ ಆಗಿದೆ ಇದನ್ನು ಮಾನ್ಯ ರೇಷ್ಮೆ ರಾಜ್ಯ ಸಚಿವರು ಕೂಡ ಒಪ್ಪಿಕೊಳ್ಳುತ್ತಾರೆ. ಮಾನ್ಯ ಸಚಿವರು ಮೊನ್ನೆ ತುಮಕೂರಿನಲ್ಲಿ ಮಾಡಿರತಕ್ಕಂಥ ಹೇಳಿಕೆಯನ್ನು ನೋಡಿದಾಗ ಬಹುಶಃ ಈಗಲೇ ನಮ್ಮ ರೇಷ್ಮೆ ಬೆಳೆಗಾರರಿಗೆ ಸಾಕಷ್ಟು ಬಿಸಿ ಮುಟ್ಟಿದೆ ಎನ್ನುವುದು ಅವರ ಹೇಳಿಕೆಯಿಂದ ಗೊತ್ತಾಗುತ್ತದೆ. ಮತ್ತು 'ಇವತ್ತು ರೇಷ್ಮೆ ಬೆಳೆಯತಕ್ಕಂಥ ಪ್ರದೇಶದಲ್ಲಿರತಕ್ಕಂಥ ಶಾಸಕರ ಸಭೆಯನ್ನು ಕರೆದು ಕೇಂದ್ರ ಸರ್ಕಾರದ ಆಮದು ನೀತಿಯನ್ನು ವಾಪಾಸ್ಸು ತೆಗೆದುಕೊಳ್ಳಬೇಕು ಎನ್ನುವ ಒತ್ತಾಯ ಸರ್ಕಾರದಿಂದ ತರುತ್ತೇವೆ' ಎಂದು ಮಾನ್ಯ ರಾಜ್ಯಪಾಲರ ಭಾಷಣ ಮೂಲಕ ಹೇಳಿಕೆಯನ್ನು ಕೊಟ್ಟಿದ್ದೀರಿ, ಇದನ್ನು ಹೇಳಿದ ಮೇಲೆ ಸರ್ಕಾರದಿಂದ ಕೈಗೊಂಡಿರುವ ಕ್ರಮ ಏನು? ಮತ್ತು 'ನಾನು ರೇಷ್ಮೆ ಬೆಳೆ ಬೆಳೆಯತಕ್ಕಂಥ ಪ್ರದೇಶದಲ್ಲಿನ ಶಾಸಕರ ಸಭೆಯನ್ನು ಕರೆಯುತ್ತೇನೆಂದು' ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆಯನ್ನು ಕೊಟ್ಟಿದ್ದು ಆ ಸಭೆಯನ್ನು ಕರೆಯುವುದಕ್ಕೆ ಏನಾದರೂ ಕ್ರಮ ಕೈಗೊಳ್ಳಲಾಗಿದೆಯೇ? ಮಾನ್ಯ ರಾಜ್ಯಪಾಲರ ಭಾಷಣದ ಮುಖಾಂತರ ಹೇಳಿದಂತೆ ಅದರ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ? ಈ ಒಂದು ನೀತಿಯನ್ನು ವಾಪಾಸ್ಸು ತೆಗೆದುಕೊಳ್ಳುವ ದಿಶೆಯಲ್ಲಿ ತಮಗೆ ಏನಾದರೂ ಭರವಸೆ ಇದೆಯೇ? ಕೇಂದ್ರ ಸರ್ಕಾರದ ವಾಣಿಜ್ಯ ಸಚಿವರು ರಾಜಕೀಯ, ವೈಯಕ್ತಿಕ ಪ್ರತಿಷ್ಠೆಯನ್ನು ಮಾಡಿಕೊಂಡು ಕೆಲವರ ಮೇಲೆ ಯುದ್ಧೋಪಾದಿಯ ರಾಜ್ಯದ ರೇಷ್ಮೆ ಬೆಳೆಗಾರರನ್ನು ಪಣವಾಗಿ ಇಟ್ಟುಕೊಂಡಿದ್ದಾರೆ. ಇದು ಸರಿಯಲ್ಲ. ಆದ್ದರಿಂದ ತಕ್ಷಣ ಸೂಕ್ತ ಕ್ರಮ ಕೈಗೊಂಡು ಈ ರೇಷ್ಮೆ ಆಮದು